## ಗೌ. ಅಧಿಕ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ಮಧುಗಿರಿ

ಕರ್ನಾಟಕ ಸರ್ಕಾರ
ಹೇಳಿಕೆ ಹಾಳೆ (ಆರ್.ಪಿ.ಸಂಖ್ಯೆಃ 57)
ನಮೂನೆ ಸಂಖ್ಯೆ 4(ಸಿವಿಲ್)

**ಓ.ಎಸ್. ನಂಃ 220/2023**

**ಪಿ.ಡಬ್ಲ್ಯೂ-1**

| | | |
|---|---|---|
| **ಹೆಸರುಃ** | / | **ಅಶ್ವತ್ಥಪ್ಪ.ಹೆಚ್.ಎಸ್.** |
| **ಗಂಃತಂದೆ ಹೆಸರು** | / | **ಸಿದ್ದಲಿಂಗಪ್ಪ** |
| **ವಯಸ್ಸು** | / | **45 ವರ್ಷ** |
| **ಉದ್ಯೋಗ** | / | **ಕೂಲಿ ಕೆಲಸ** |
| **ವಾಸಸ್ಥಳ** | / | **ಹುಣಸವಾಡಿ, ಮಧುಗಿರಿ ತಾಲ್ಲೂಕು** |

**ದಿನಾಂಕಃ 04-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಮುಖ್ಯ ವಿಚಾರಣೆಃ ಶ್ರೀ. ಜಿ.ಬಿ.ಹೆಚ್. ವಕೀಲರಿಂದಃ**

ಈ ದಿವಸ ನನ್ನ ಮುಖ್ಯ ವಿಚಾರಣೆಗಾಗಿ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ. ಸದರಿ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ನಾನೇ ನೀಡಿದ್ದು, ಅದರಲ್ಲಿ ಬರೆದಿರುವ ಎಲ್ಲಾ ಸಂಗತಿಗಳು ಸತ್ಯವಾಗಿದ್ದು, ಅದರ ಎಲ್ಲಾ ಅಂಶಗಳನ್ನು ನನ್ನ ವಕೀಲರ ಮೂಲಕ ಓದಿಸಿ ತಿಳಿದುಕೊಂಡು ಪ್ರಮಾಣೀಕರಿಸಿ ಪ್ರಮಾಣ ಪತ್ರಕ್ಕೆ ನನ್ನ ಸಹಿಯನ್ನು ಹಾಕಿರುತ್ತೇನೆ.

ಈ ದಾವೆಗೆ ಸಂಬಂಧಿಸಿದಂತೆ, ದತ್ತು ಸ್ವೀಕಾರ ಆಹ್ವಾನ ಪತ್ರಿಕೆಯನ್ನು ನಿಪಿ.1 ಎಂದು, ದಿಃ 22.07.1991 ರ ದತ್ತು ಸ್ವೀಕಾರ ದಾಖಲೆಯ ದೃಢೀಕೃತ ಪ್ರತಿಯನ್ನು ನಿಪಿ.2 ಎಂದು, 4 ಗಣಕೀಕೃತ ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ.3 ರಿಂದ 6 ಎಂದು, ಆನ್ ಲೈನ್ ಮೂಲಕ ಪಡೆದ ನಿವೇಶನ ಶುದ್ಧ ಕ್ರಯ ಪತ್ರದ ಪ್ರತಿಯನ್ನು ನಿಪಿ.7 ಎಂದು, ಹಕ್ಕು ಬದಲಾವಣೆ ವಹಿಯ ದೃಢೀಕೃತ ಪ್ರತಿಯನ್ನು ನಿಪಿ.8 ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

ನನ್ನಃಉಃಲ್ಲೇಃ ಕ್ಕೆಃ ಬೆರಳಚ್ಚು ಮಾಡಲಾಗಿದೆ.

ಓದಿ ಹೇಳಿ ಕೇಳಿ ಸರಿಯಾಗಿದೆ

ಅಧಿಕ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಮಧುಗಿರಿ.